ಶ್ರೀ ವೈ. ಎಂ ಚಂದ್ರಶೇಖರಯ್ಯ.—ಮುಜರಾಯಿ ಇಲಾಖೆಗೆ ಸೇರಿದ ಮೂಡಿಗೆರೆ ತಾಲ್ಲೂಕು ದೇವಸ್ಥಾನಗಳ ರಿಪೇರಿ ಕೆಲಸ ಕೈಗೊಂಡಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಈ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಹಳ್ಳಿಗಳ ಕಡೆ ಕೇಂದ್ರ ಸರ್ಕಾರಕ್ಕೆ ವಹಿಸದಿರುವ ದೇವಸ್ಥಾನಗಳ ರಿಪೇರಿಗಾಗಿ ಒದಗಿಸಿರುವ ಹಣ ಬಹಳ ಕಡಮೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯಕ್ಕೆ ಸಂಬಂಧಪಟ್ಟ ವಿಷಯ.

ಶ್ರೀ ಡಿ. ಆರ್. ಕರಿಗೌಡ.—ನಾವು ಅರ್ಧ ಹಣ ಕೊಟ್ಟರೆ ಸರ್ಕಾರದವರು ಅರ್ಧ ಹಣ ಹಾಕುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಾದ ಕಡೆ ಕೊಟ್ಟಿದೆ. ಎಲ್ಲಿ ಅವಶ್ಯಕವಿದೆಯೆಂದು ಹೇಳಿದರೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಮೈಸೂರು ಪ್ರದೇಶದಲ್ಲಿ ದೇವಸ್ಥಾನಗಳಿಗಾಗಿ ಕೇವಲ 20-30 ಸಾವಿರ ರೂಪಾಯಿಗಳನ್ನೊದಗಿಸುತ್ತಿರುವುದು ಬಹಳ ಕಡಮೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದೊಂದು ಡಿಸ್ಟ್ರಿಕ್ಟ್‌ಗೆ 10-12 ಸಾವಿರ ರೂಪಾಯಿಗಳನ್ನು ರಿಪೇರಿಗಾಗಿ ಹಂಚುತ್ತಿದೆ.

ಶ್ರೀ ಡಿ. ಆರ್. ಕರಿಗೌಡ.—ಹಳ್ಳಿಯವರು ಅರ್ಧ ಕೊಟ್ಟರೆ ಸರ್ಕಾರ ಅರ್ಧ ಹಣ ಕೊಡಲು ಯೋಚನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಖಾಯಮ್ಮಾಗಿ ತಾವು ಹೇಳುವ ನೀತಿಯನ್ನನುಸರಿಸುವುದಕ್ಕಾಗುವುದಿಲ್ಲ. ಸಂದರ್ಭಾನುಸಾರ ಅವಲಂಬಿಸುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಹಾಗಾದರೆ ಹತ್ತು ಸಾವಿರ ರೂಪಾಯಿ ಬೇಕಾಗಿರುವ ಕಡೆಗೆ ಒಂದು ಸಾವಿರ ರೂಪಾಯಿ ಕೊಟ್ಟರೆ ಸಾಕೆ ?

ಶ್ರೀ ಕಡಿದಾಳ್ ಮಂಜಪ್ಪ.—ಏನುಮಾಡುವುದು ? ಪ್ರತಿಯೊಂದು ಹಳ್ಳಿಯಲ್ಲೂ 2—3 ದೇವಸ್ಥಾನಗಳಿವೆ. ಸರ್ಕಾರವೇ ಮಾಡುವುದು ಕಷ್ಟ. ಭಕ್ತರೂ ಸಹಾಯ ಮಾಡಬೇಕು.

ಶ್ರೀ ಡಿ. ಆರ್. ಕರಿಗೌಡ.—ಹಳ್ಳಿಗರು ಅರ್ಧಭಾಗ ಕೊಟ್ಟರೆ ನೀವು ಇನ್ನರ್ಧ ಕೊಡಲು ಕಷ್ಟವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಸಂದರ್ಭಗಳಲ್ಲೂ ಆ ರೀತಿ ನೀತಿಯನ್ನು ಅನುಸರಿಸುವುದಕ್ಕಾಗುವುದಿಲ್ಲ.

ಶ್ರೀ ಜಿ. ಶಿವಪ್ಪ.—ಚರಿತ್ರಾರ್ಹವಾಗಿರತಕ್ಕ ಚಿತ್ರದುರ್ಗದ ಏಳು ಸುತ್ತಿನ ಕೋಟೆ ರಿಪೇರಿಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಚೆನ್ನಾಗಿ ಪ್ರಿಸರ್ವ್ ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ಕಾಲೇದುರ್ಗ, ಇಕ್ಕೇರಿ, ಕೆಳದಿ—ಈ ಜಾಗಗಳಲ್ಲಿ ಕೋಟೆ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ನೋಡಿದ್ದಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಡಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅವು ಬಹಳ ಹೀನ ಸ್ಥಿತಿಯಲ್ಲಲ್ಲವೆ? ಕಾಡು ಬೆಳೆದುಕೊಂಡು ಮನುಷ್ಯರು ಹೋಗುವುದಕ್ಕೆ ಕಷ್ಟವಾಗಿದೆ. ಅದನ್ನು ಸರ್ಕಾರದವರು ಪರಿಶೀಲನೆಮಾಡಿ ಅವುಗಳಿಗೆ ಸರಿಯಾದ ರಸ್ತೆಗಳನ್ನು ಮಾಡಿಸುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಮಾಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಗೋಮಟೇಶ್ವರ ಪ್ರತಿಮೆಗೆ ಮೈಮೇಲೆ ತುರಿಬಂದು ಆ ಶಿಲೆ ನಶಿಸಿ ಹೋಗುತ್ತಾ ಇರುವ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಒಂದು ಕಮಿಟಿ ನೇಮಕವಾಗಿತ್ತು. ಅವರು ಅದರ ವಿಷಯದಲ್ಲಿ ಪರಿಶೀಲನೆಮಾಡಿರುತ್ತಾರೆ. ಈಚೆಗೆ ಯಾವ ವರದಿಯೂ ಬಂದಿಲ್ಲ.

Teachers Officials and Officers of the Education Department.

Q.—345. **Sri D. R. KARI GOWDA** (Hassan).—

Will the Government be pleased to state :—

(*a*) what would be the extra cost involved if the new scales of pay contemplated in respect of teachers, officials and officers of the Education Department are to be given effect to ;

(*b*) the steps that have been taken by them to meet this extra cost ?

A.—**Sri A. G. RAMACHANDRA RAO** (Minister for Law and Education).—

(*a*) The extra cost of introducing the scales of pay recommended by the Educational Reforms Committee has been worked out on a preliminary calculation at Rs. 10,35,895 per annum recurring.

(*b*) The question is under consideration.

ಶ್ರೀ ಡಿ. ಆರ್. ಕರಿಗೌಡ.—ಈ ವಿದ್ಯಾನುಧಾರಣೆ ಪ್ರಕಾರ ಪ್ರೈಮರಿ ಸ್ಕೂಲು ಮೇಸ್ಟರುಗಳಿಗೆ ಯಾವ ಗ್ರೇಡು ಕೊಡಬೇಕೆಂದು ಹೇಳಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರುಗಳಿಗೆಲ್ಲಾ 40 ರೂಪಾಯಿನಿಂದ ಪ್ರಾರಂಭ ಮಾಡಬೇಕಾಗುತ್ತದೆ. ಅವರೆಲ್ಲಾ S. S. L. C. Candidates ಆಗಿರಬೇಕೆಂದು ಹೇಳಿದೆ.

ಶ್ರೀ ಡಿ. ಆರ್. ಕರಿಗೌಡ.—ಮಿಡ್ಲ್ ಸ್ಕೂಲು ಮೇಸ್ಟರುಗಳಿಗೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಜ್ಞಾಪಕ ಇಲ್ಲ.

ಶ್ರೀ ಡಿ. ಆರ್. ಕರಿಗೌಡ.—ಬರೀ ಪ್ರೈಮರೀ ಸ್ಕೂಲು ಮೇಷ್ಟರುಗಳಿಗೆ ಈ ರೀತಿ 40 ರೂಪಾಯಿ ನಂತೆ ಕೊಟ್ಟರೆ ಎಷ್ಟು ಹೆಚ್ಚಿಗೆ ಖರ್ಚಾಗುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶಿಷ್ಟದಲ್ಲಿ ಅದನ್ನು ಕೊಟ್ಟಿದೆ. ಜ್ಞಾಪಕದಿಂದ ಹೇಳುವುದು ಕಷ್ಟ.

ಶ್ರೀ ಡಿ. ಆರ್. ಕರಿಗೌಡ.—ಪ್ರೈಮರಿ, ಮಿಡ್ಲ್, ಹೈಸ್ಕೂಲು ವಿದ್ಯಾಭ್ಯಾಸ ಬದಲಾವಣೆ ಮಾಡಿದರೆ 10,35,895 ರೂಪಾಯಿ ಆಗುತ್ತದೆಂದು ಹೇಳಿದ್ದೀರಿ. ಸಂಸ್ಕೃತಿ ಪ್ರಚಾರ, ಅಡಲ್ಟ್ ಎಜ್ಯೂಕೇಷನ್ ಮುಂತಾದುವುಗಳಿಗೆ ಕೊಡುತ್ತಾ ಇರತಕ್ಕ ಹಣವನ್ನು ಕೂಡ ಇದಕ್ಕೆ ಖರ್ಚುಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗ ಆ ಕೆಲಸ ಎಲ್ಲಾ ಮೂಲೆಗೆ ಬೀಳುತ್ತದೆ.

ಶ್ರೀ ವೈ. ಎಂ. ಚೆಂದ್ರಶೇಖರಯ್ಯ.—ಪ್ರೈಮರಿ ಸ್ಕೂಲು ಮೇಸ್ಟರುಗಳಿಗೆ ನಮ್ಮ ಸರ್ಕಾರದವರು 25 ರೂಪಾಯಿ ಕೊಡುತ್ತಾರೆ. ಇಂಡಿಯಾ ಸರ್ಕಾರದವರು 40 ರೂಪಾಯಿ ಕೊಡುತ್ತಾರೆ. ಒಂದೇ ದೇಶದಲ್ಲಿ ಈ ರೀತಿ ಆಗಿ ತಾರತಮ್ಯ ಇರುವುದು ನ್ಯಾಯವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಮ್ಮ ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳಿಗೆ ಸ್ಕೂಲ್ ಫೈನಲ್ ಕ್ವಾಲಿಫಿಕೇಷನ್ ಇರಬೇಕು ಎಂಬ ನಿಯಮ ಇಲ್ಲ. ಗವರ್ನಮೆಂಟ್ ಆಫ್ ಇಂಡಿಯಾದವರ ಸ್ಕೇಲ್ ನಲ್ಲಿ ಬಂದರೆ ಸ್ಕೂಲ್ ಫೈನಲ್ ಆಗಿರುವ candidate ಆಗಿರಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ನಮ್ಮ ಪ್ರೈಮರಿ ಸ್ಕೂಲುಗಳಲ್ಲಿ ಸ್ಕೂಲ್ ಫೈನಲ್ ಆಗಿರುವವರು ಬಹಳ ಮಂದಿ ಇದ್ದಾರೆ ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರೇ ಸ್ವೇಚ್ಛೆಯಾಗಿ ಒಪ್ಪಿಕೊಂಡಿದ್ದಾರೆ, ನಾವೇನೂ ಮಾಡುವುದ ಕ್ಕಾಗುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಎಸ್.ಎಸ್. ಎಲ್. ಸಿ. ಪಾಸ್ ಆಗಿರತಕ್ಕ ಉಪಾಧ್ಯಾಯರುಗಳ ಸಂಬಳವನ್ನು 40 ರೂಪಾಯಿಗಳಿಗೆ ಏರಿಸುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಪರಿಶೀಲನೆ ಮಾಡಿದ್ದೇವೆ. ಅದಕ್ಕೆ ಈಗ ಒಂದು ಕ್ರಮ ಜಾರಿಗೆ ತರಬೇಕೆಂದು ಪರಿಶೀಲನೆ ಮಾಡುತ್ತಾ ಇದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಇಂಡಿಯಾ ಸರ್ಕಾರದವರು ಕೊಟ್ಟಿರುವ ಹಣದ ಅನುಕೂಲತೆಯಲ್ಲಿ ಹೊಸದಾಗಿ ನೇಮಕ ಮಾಡುವವರಿಗೆ 40 ರೂಪಾಯಿನಂತೆ ಕೊಡುತ್ತೀರಿ. ಅದೇ ರೀತಿ ಈಗ ಸರ್ವಿಸ್‌ನಲ್ಲಿದ್ದು ಎಸ್. ಎಸ್. ಎಲ್. ಸಿ. ಪಾಸ್ ಆಗಿರುವವರಿಗೂ ಕೊಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—Unemployment reliefಗಾಗಿ ಯಾರ್ಯಾರು ನೇಮಕವಾಗಿದ್ದಾರೋ ಅವರಿಗೆ ಮಾತ್ರ ಈ ರೀತಿ ಮಾಡಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ವಿದ್ಯಾಭ್ಯಾಸ ಸುಧಾರಣೆಯನ್ನು ಈಗಾಗಲೇ ಸರ್ಕಾರದವರು ಜಾರಿಗೆ ತಂದಿರುವುದರಿಂದ, ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸತಕ್ಕಂಥ ಬಹಳ ಮುಖ್ಯವಾದ ಈ ಅಂಶವನ್ನು ಸರ್ಕಾರದವರು ಆಚರಣೆಗೆ ತಂದು, ಅವರಿಗೆ ಈ ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರು ಶಿಫಾರಸುಮಾಡಿರುವ ಸ್ಕೇಲುಗಳನ್ನು ಕೊಡಲುಏಕೆ ಯೋಚನೆ ಮಾಡಲಿಲ್ಲ!

ಶ್ರೀ ಎ. ಜಿ. ರಾಮಚಂದ್ರರಾವ್.—ಯೋಚನೆ ಮಾಡಿಲ್ಲ ಎಂದು ನಾನು ಹೇಳಿಲ್ಲ.

ಶ್ರೀ ಎಸ್. ಗೋಪಾಲಗೌಡ.—ವಿದ್ಯಾಭ್ಯಾಸ ಸುಧಾರಣೆ ಜಾರಿಗೆ ತಂದಿರುವುದರಿಂದ ಅವರಿಗೆ ಕೆಲಸ ಹೆಚ್ಚಿದೆ ಮತ್ತು ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಬೇಕಾಗಿರುವುದರಿಂದ ಆ ರೀತಿ ಹೊಸ ಸ್ಕೇಲುಗಳನ್ನು ಕೊಡುವುದು ಸೂಕ್ತವಲ್ಲವೇ ?

ಅಧ್ಯಕ್ಷರು.—ಅದನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರಲ್ಲಾ !

ಶ್ರೀ ಎಸ್. ಗೋಪಾಲಗೌಡ.—ಸುಧಾರಣೆ ಜಾರಿಗೆ ತಂದಿರುವಾಗ ಅದರ ಜೊತೆಗೇ ಈ ಹೊಸ ಸ್ಕೇಲುಗಳನ್ನು ಕೂಡ ಜಾರಿಗೆ ತರಬೇಕಾದ್ದು ಅಗತ್ಯವಾಗಿರಲಿಲ್ಲವೇ ಎಂದು ನನ್ನ ಪ್ರಶ್ನೆ !

ಶ್ರೀ ಎ. ಜಿ. ರಾಮಚಂದ್ರರಾವ್.—ಹೊಸ ಸುಧಾರಣೆಗಳ ಪೈಕಿ ಈ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಬೇಕು ಎಂಬುದರ ಜೊತೆಗೆ—ಉಪಾಧ್ಯಾಯರುಗಳಿಗೂ ಕೂಡ ಸ್ಕೂಲ್ ಫೈನಲ್ ಪಾಸ್ ಆಗಿರಬೇಕು, ಟ್ರೈನಿಂಗ್ ಆಗಿರಬೇಕು ಎಂದು ಹೇಳಿ ಸೂಚನೆ ಮಾಡಿದ್ದಾರೆ. ಆದ್ದರಿಂದ ಸಂಬಳ ಒಂದೇ ನಿಗದಿ ಇಟ್ಟು ಕೊಂಡು ಮಾಡುವುದಕ್ಕಾಗುವುದಿಲ್ಲ. ಅವುಗಳನ್ನೆಲ್ಲಾ ಇಟ್ಟುಕೊಂಡು ಪರಿಶೀಲನೆ ಮಾಡಬೇಕು.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಸ್ಕೂಲ್ ಫೈನಲ್ ಆಗಿರತಕ್ಕವರಿಗೆ ಮತ್ತು ಟ್ರೈನಿಂಗ್ ಆಗಿರತಕ್ಕವರಿಗೆ ಸಂಬಳವನ್ನು ಬದಲಾವಣೆ ಮಾಡಿ, ಹೊಸ ಸ್ಕೇಲ್ ಪ್ರಕಾರ ಕೊಟ್ಟಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರೊಬ್ಬರಿಗೇ ಮಾಡುವುದಕ್ಕಾಗುವುದಿಲ್ಲ. ಸಮಗ್ರವಾಗಿ ಎಲ್ಲಾ ಭಾಗವನ್ನು ಪರಿಶೀಲನೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಈಗ ತಾವೇ ಹೇಳಿದಿರಿ. ಸ್ಕೂಲ್ ಫೈನಲ್ ಆಗಿರಬೇಕು ಮತ್ತು ಟ್ರೈನಿಂಗ್ ಆಗಿರಬೇಕು. ಅವರಿಗೆ ಹೊಸ ಸ್ಕೇಲು ತಕ್ಷಣ ಅನ್ವಯಿಸುತ್ತೇವೆ ಅಂತ.

ಶ್ರೀ ಎ. ಜಿ. ರಾಮಚಂದ್ರರಾವ್.—ಅನ್ವಯಿಸುತ್ತೇವೆ ಎಂದು ಹೇಳಲಿಲ್ಲ, ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ಆ ರೀತಿ ಪಾಸ್ ಆಗಿರುವವರು ಮತ್ತು ಟ್ರೈನಿಂಗ್ ಆಗಿರುವವರಿಗಾದರೂ ಕೊಡಬಹುದಲ್ಲಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಡತಕ್ಕ ಭಾಗ ಆರೋಚನೆ ಮಾಡಿ, ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಗಮನಿಸಿ ಮಾಡಬೇಕಾಗುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಈ ಪ್ರೈಮರಿ ಸ್ಕೂಲ್ ಉಪಾಧ್ಯಾಯರುಗಳ family Budget ತರಿಸಿ ಕೊಂಡು ನೋಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈಗ ಅವರಿಗೆ ಇರತಕ್ಕ ಸಂಬಳ ಮಿನಿಮಂ ವೇಜಸ್‌ಗಿಂತ ಕಡಿಮೆ ಆಗಿದೆ. ಸಿಟಿಗಳಲ್ಲಿರತಕ್ಕ ಮಿಲ್ಲುಗಳು, ಫ್ಯಾಕ್ಟರಿಗಳಲ್ಲಿ ಕೆಲಸಮಾಡತಕ್ಕ ಲೇಬರರ್ಸ್‌ಗೆ ಕೊಡತಕ್ಕ ಮಿನಿಮಂ ವೇಜಸ್‌ಗಿಂತ ಕಡಿಮೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಷ್ಟು ತೃಪ್ತಿಕರವಾಗಿಲ್ಲ ಎಂದು ಗೊತ್ತಾಗಿದೆ.

ಶ್ರೀ ಪಿ. ಆರ್. ರಾಮಯ್ಯ.—ಈಗ ತಂದಿರುವ ಸುಧಾರಣಾ ವ್ಯವಸ್ಥೆ ತೃಪ್ತಿಕರವಾಗಿ ನಡೆಯಬೇಕಾದರೆ ಎಲ್ಲಾ ಕೆಲಸಗಳಿಗಿಂತಲೂ ಮೊದಲು ಈ ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳ ಸಂಬಳದ ಸ್ಕೇಲನ್ನು ಉತ್ತಮಪಡಿಸುವುದು ಅಗತ್ಯ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದು ಮುಖ್ಯವಾದ ಅಂಶ ಎಂದು ಗೊತ್ತಿದೆ.

ಶ್ರೀ ಪಿ. ಆರ್ ರಾಮಯ್ಯ.—ಈಗ ಸರ್ಕಾರದವರು 500 ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳ ಬರುವವರಿಗೆ ಅಲೋಯನ್ಸ್ ಕಡಿಮೆ ಮಾಡುವುದರಿಂದ 10 ಲಕ್ಷ ರೂಪಾಯಿ ಉಳಿತಾಯವಾಗುವುದನ್ನು ಪ್ರೈಮರಿ ಸ್ಕೂಲು ಉಪಾಧ್ಯಾಯರ ಸಂಬಳ ಹೆಚ್ಚಿಸುವುದಕ್ಕೆ ವಿನಿಯೋಗ ಮಾಡಲು ಸಾಧ್ಯವಾಗುತ್ತದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.